# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೩<br>Part – III | ಬೆಂಗಳೂರು, ಶುಕ್ರವಾರ,೧೧, ಡಿಸೆಂಬರ್ ,೨೦೨೦(ಮಾರ್ಗಶಿರ,೨೦, ಶಕವರ್ಷ ೧೯೪೨)<br>Bengaluru, FRIDAY,11,DECEMBER,2020( MARGASHIRA,20, ShakaVarsha 1942) | ನಂ. ೬೭೫<br>No. 675 |
|---|---|---|

## ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

**ಕರ್ನಾಟಕ ಸಹಕಾರ ಮಾರಾಟ ಮಹಾ ಮಂಡಳಿ ಕಟ್ಟಡದ (ಹಿಂಭಾಗ) 1ನೇ ಮಹಡಿ, ನಂ. 8, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು-560052.**

## ಕರ್ನಾಟಕ ರಾಜ್ಯ ಚುನಾವಣಾ ಆಯೋಗದ ನಡವಳಿ

ವಿಷಯ: ಗ್ರಾಮ ಪಂಚಾಯಿತಿಗಳ ಸಾರ್ವತ್ರಿಕ ಚುನಾವಣೆ-2020 ಚುನಾವಣಾ ಪ್ರಕ್ರಿಯೆಯಿಂದ ಕೆಲವು ಗ್ರಾಮ ಪಂಚಾಯಿತಿಗಳನ್ನು ಕೈಬಿಡುವ ಬಗ್ಗೆ

ಓದಲಾಗಿದೆ:

1. ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ:ರಾಚುಆ:134:ಇಜಿಪಿ:2020, ದಿನಾಂಕ: 30.11.2020
2. ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ಇವರ ಪತ್ರ ಸಂಖ್ಯೆ:ಇಎಲ್ಎನ್: ಸಿಆರ್: 63:2020 ದಿನಾಂಕ:07.12.2020
3. ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಇವರ ಪತ್ರ ಸಂಖ್ಯೆ:ಚುನಾವಣೆ:07:2020 ದಿ.05.12.2020
4. ಜಿಲ್ಲಾಧಿಕಾರಿಗಳು ವಿಜಯಪುರ ಜಿಲ್ಲೆ ಇವರ ಪತ್ರ ಸಂಖ್ಯೆ:ಕಂವಿ/ಗ್ರಾಪಂ/ಚುನಾವಣೆ: ವಿವ-18/2020-21 ದಿನಾಂಕ:06.11.2020 (ಸ್ವೀಕೃತಿ-21.11.2020).
5. ಪ್ರಾದೇಶಿಕ ಆಯುಕ್ತರು,ಬೆಳಗಾವಿ ವಿಭಾಗ, ಬೆಳಗಾವಿ ಇವರ ಪತ್ರ ಸಂಖ್ಯೆ:ಪ್ರಾಆಬೆ: ಜಿಪಂ/ವಿವ-06/2020-21 ದಿ.04.12.2020 ಮತ್ತು ದಿ.07.12.2020

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ಚುನಾವಣಾ ಆಯೋಗವು ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಆದೇಶದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 308ಎಎ ಮತ್ತು 308ಎಬಿ ರನ್ವಯ ಹಾಗೂ ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆ ನಡೆಸುವ) ನಿಯಮಗಳು, 1993ರ ನಿಯಮ 12 ರನ್ವಯ ಚುನಾವಣಾ ವೇಳಾ ಪಟ್ಟಿಯನ್ನು ಘೋಷಿಸಿದೆ.

ಕ್ರಮಸಂಖ್ಯೆ (2) ರಲ್ಲಿ ಓದಲಾದ ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ಇವರ ಪತ್ರದಲ್ಲಿ ಹನಗುಂದ ತಾಲ್ಲೂಕಿನ ಮನ್ಮಥನಾಳ ಗ್ರಾಮವನ್ನು ಹಾವರಗಿ ಗ್ರಾಮ ಪಂಚಾಯಿತಿಯಿಂದ ಬೇರ್ಪಡಿಸಿ ಬಿಂಜವಾಡಗಿ ಗ್ರಾಮ ಪಂಚಾಯಿತಿಗೆ ಸೇರ್ಪಡೆ ಮಾಡಿ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ಇವರು ಆದೇಶಿಸಿರುವ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:147525/2020 ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ಪ್ರಾದೇಶಿಕ ಆಯುಕ್ತರ ದಿನಾಂಕ:03.07.2020ರ ಆದೇಶಕ್ಕೆ ತಡೆಯಾಜ್ಞೆ ನೀಡಿರುವುದರಿಂದ ಹಾವರಗಿ

ಮತ್ತು ಬಿಂಜರವಾಡಗಿ ಗ್ರಾಮಪಂಚಾಯಿತಿಗಳ ಚುನಾವಣೆಯನ್ನು ಕೈಬಿಡುವ ಬಗ್ಗೆ ಆಯೋಗದ ಅನುಮತಿ ಕೋರಿರುತ್ತಾರೆ.

ಮಾನ್ಯ ಉಚ್ಚ ನ್ಯಾಯಾಲಯವು ಅರ್ಜಿದಾರರು ಕೋರಿರುವಂತೆ, ಪ್ರಾದೇಶಿಕ ಆಯುಕ್ತರ ದಿನಾಂಕ: 03.07.2020ರ ಆದೇಶವನ್ನು ಜಾರಿಗೊಳಿಸುವ, ಕಾರ್ಯಗತಗೊಳಿಸುವುದಕ್ಕೆ ತಡೆಯಾಜ್ಞೆ ನೀಡಿರುವುದರಿಂದ ಹಾಗೂ ಸದರಿ ಪ್ರಕರಣದಲ್ಲಿ ಗ್ರಾಮದ ಬದಲಾವಣೆಯಾದಲ್ಲಿ ಸ್ಥಾನಗಳ ಸಂಖ್ಯೆ ಹಾಗೂ ಮೀಸಲಾತಿಯಲ್ಲಿ ವ್ಯತ್ಯಾಸವಾಗುವುದರಿಂದ, ಎರಡೂ ಗ್ರಾಮ ಪಂಚಾಯಿತಿಗಳ ಚುನಾವಣೆಯನ್ನು ಕೈಬಿಡುವುದು ಅವಶ್ಯಕವಾಗಿರುತ್ತದೆ.

ಕ್ರಮಸಂಖ್ಯೆ (3) ರಲ್ಲಿ ಓದಲಾದ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಇವರ ಪತ್ರದಲ್ಲಿ ಹಗರಿಬೊಮ್ಮನಹಳ್ಳಿ ತಾಲ್ಲೂಕು, 11–ಮುತ್ಕೂರು ಗ್ರಾಮ ಪಂಚಾಯಿತಿಗೆ ಒಟ್ಟು 14 ಸ್ಥಾನಗಳಿದ್ದು, 2015ರಲ್ಲಿ ಸಾರ್ವತ್ರಿಕ ಚುನಾವಣೆ ನಡೆದಿರುತ್ತದೆ. ಇದರಲ್ಲಿ 8 ಸ್ಥಾನಗಳಿಗೆ ಮಾತ್ರ ಆಯ್ಕೆಯಾಗಿದ್ದು, 2/3 ಸದಸ್ಯರು ಆಯ್ಕೆಯಾಗದೆ ಇದ್ದುದರಿಂದ, ಆಡಳಿತಾಧಿಕಾರಿಯನ್ನು ನೇಮಿಸಲಾಗಿರುವುದಾಗಿಯೂ, ನಂತರ ನಡೆದ ಉಪ ಚುನಾವಣೆಯಲ್ಲಿಯೂ ಉಳಿದ 6 ಸ್ಥಾನಗಳು ಆಯ್ಕೆಯಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮುಂದುವರೆದು, ಸದರಿ ಗ್ರಾಮ ಪಂಚಾಯಿತಿಗೆ ಆಯ್ಕೆಯಾಗಿದ್ದ ಸದಸ್ಯರು ತಾವು ಆಯ್ಕೆಯಾಗಿದ್ದು, ಆಡಳಿತ ನಡೆಸದೇ ಇರುವುದರಿಂದ ತಮ್ಮ ಅವಧಿ ಮುಕ್ತಾಯವಾಗಿರುವುದಿಲ್ಲವೆಂದು, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ರಿ.ಅರ್ಜಿ ಸಂಖ್ಯೆ: 146571–577/2020 ರಲ್ಲಿ ನೀಡಿರುವ ಮಧ್ಯಂತರ ಆದೇಶದಲ್ಲಿ ರಿಟ್ ಅರ್ಜಿದಾರರು ಆಯ್ಕೆಯಾಗಿರುವ ಸ್ಥಾನಗಳಿಗೆ ಚುನಾವಣೆ ನಡೆಸದಂತೆ ಆದೇಶಿಸಿರುವುದಾಗಿ ತಿಳಿಸಿರುತ್ತಾರೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 5(4)ರ ಪರಂತುಕದಂತೆ, ಹಾಗೂ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳಲ್ಲಿನ ಸ್ಥಾನಗಳನ್ನು ಆವರ್ತನೆಯ ಮೇಲೆ ಮೀಸಲಿಡುವ) ನಿಯಮಗಳು, 1998ರಂತೆ ಮುತ್ಕೂರು ಗ್ರಾಮ ಪಂಚಾಯಿತಿಗೆ ರೊಟೇಶನ್ ರೀತ್ಯ ಸ್ಥಾನಗಳನ್ನು ಬೇರೆ ಬೇರೆ ಕ್ಷೇತ್ರಗಳಿಗೆ ಹಂಚಿಕೆಮಾಡಿ ಅಧಿಸೂಚಿಸಲಾಗಿದೆ. ರಿಟ್ ಅರ್ಜಿದಾರರು 2015ರಲ್ಲಿ ಆಯ್ಕೆಯಾಗಿರುವ ಸ್ಥಾನಕ್ಕೂ, ಪ್ರಸ್ತುತ 2020ರಲ್ಲಿ ಅಧಿಸೂಚಿಸಿರುವ ಆ ಕ್ಷೇತ್ರದಲ್ಲಿರುವ ಸ್ಥಾನಕ್ಕೂ ತಾಳೆಯಾಗುವುದಿಲ್ಲ. ಆದುದರಿಂದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ: 146571–577/2020ರ ಅಂತಿಮ ಆದೇಶದವರೆಗೆ ಸದರಿ ಗ್ರಾಮ ಪಂಚಾಯಿತಿಯ ಎಲ್ಲಾ ಕ್ಷೇತ್ರದ ಚುನಾವಣೆಯನ್ನು ಸ್ಥಗಿತಗೊಳಿಸುವುದು ಸೂಕ್ತವಾಗಿರುತ್ತದೆ.

ಕ್ರಮ ಸಂಖ್ಯೆ (4) ರಲ್ಲಿ ಓದಲಾದ ಜಿಲ್ಲಾಧಿಕಾರಿಗಳು ವಿಜಯಪುರ ಜಿಲ್ಲೆ ಇವರ ಪತ್ರದಲ್ಲಿ ಸಿಂಧಗಿ ತಾಲ್ಲೂಕಿನ ಒತಿಹಾಳ ಗ್ರಾಮವನ್ನು ಕನ್ನೊಳಿ ಗ್ರಾಮ ಪಂಚಾಯಿತಿಗೆ ಸೇರ್ಪಡೆ ಮಾಡಿ ಆದೇಶಿಸಿದ ಪ್ರಾದೇಶಿಕ ಆಯುಕ್ತರು ಬೆಳಗಾವಿ ಆದೇಶ ನಂ ಪ್ರಾಆಬೆ/ಗ್ರಾಪಂ/ವಿಪಿ–06/2020–21 ದಿ.03.07.2020ರ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯ, ಕಲಬುರಗಿ ಪೀಠ ರಲ್ಲಿ ರಿಟ್ ಅರ್ಜಿ ಸಂಖ್ಯೆ:226467/2020 ದಾಖಲಾಗಿರುವುದಾಗಿ ತಿಳಿಸಿರುತ್ತಾರೆ. ಈ ಬಗ್ಗೆ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ ಇವರಿಂದ ಮಾಹಿತಿ ಪಡೆಯಲಾಗಿ, ಉಲ್ಲೇಖ (5) ಲ್ಲಿ ಓದಲಾದ ಪ್ರಾದೇಶಿಕ ಆಯುಕ್ತರ ಪತ್ರದಲ್ಲಿ ತಿಳಿಸಿರುವಂತೆ ಮಾನ್ಯ ಉಚ್ಚ ನ್ಯಾಯಾಲಯವು ದಿ.20.10.2020ರ ಆದೇಶದಲ್ಲಿ ಸದರಿ ಪ್ರಕರಣವನ್ನು ಮರು ಪರಿಶೀಲಿಸಲು ಆದೇಶಿಸಿರುವುದಾಗಿಯೂ, ಅದರಂತೆ ಪ್ರಕರಣವನ್ನು ದಿನಾಂಕ:14.12.2020 ರಂದು ವಿಚಾರಣೆಗೆ ನಿಗದಿಪಡಿಸಿರುವುದಾಗಿ, ಹಾಗೂ ಅಂತಿಮ ಆದೇಶವಾಗುವವರೆಗೆ ಸಿಂಧಗಿ ತಾಲ್ಲೂಕಿನ ಬಂದಾಳ ಹಾಗೂ ಕನ್ನೊಳ್ಳಿ ಗ್ರಾಮ ಪಂಚಾಯಿತಿಯ ಚುನಾವಣೆಯನ್ನು ಮುಂದೂಡುವಂತೆ ಕೋರಿರುತ್ತಾರೆ. ಸದರಿ ಪ್ರಕರಣದಲ್ಲಿ ಗ್ರಾಮದ ಬದಲಾವಣೆ ಬಗ್ಗೆ ಪ್ರಶ್ನಿತವಾಗಿರುವುದರಿಂದ ಸದರಿ ಗ್ರಾಮ ಪಂಚಾಯಿತಿಗಳ ಚುನಾವಣೆಯನ್ನು ಕೈಬಿಡುವುದು ಅವಶ್ಯಕವಾಗಿರುತ್ತದೆ. ಆದುದರಿಂದ ಈ ಆದೇಶ.

**ಆದೇಶ ಸಂಖ್ಯೆ: ರಾಚುಆ:134:ಇಜಿಪಿ:2020, ಬೆಂಗಳೂರು ದಿನಾಂಕ: 10.12.2020**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಂತೆ ಭಾರತ ಸಂವಿಧಾನ ಅನುಚ್ಛೇದ 243 k ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 308 ರಲ್ಲಿ ದತ್ತವಾಗಿರುವ ಅಧಿಕಾರದ ಮೇರೆಗೆ, ಈ ಕೆಳಕಂಡ ಗ್ರಾಮ ಪಂಚಾಯಿತಿಗಳ ಚುನಾವಣೆಯನ್ನು ಕ್ರಮ ಸಂಖ್ಯೆ (1)ರ ಆದೇಶದಿಂದ ಕೈಬಿಡಲಾಗಿದೆ ಎಂದು ಆದೇಶಿಸಿದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



**ಚುನಾವಣೆಯಿಂದ ಕೈಬಿಡಲಾದ ಗ್ರಾಮ ಪಂಚಾಯಿತಿಗಳು**

| ಕ್ರ. ಸಂ. | ಜಿಲ್ಲೆ | ತಾಲ್ಲೂಕು | ಗ್ರಾಮ ಪಂಚಾಯಿತ |
|---|---|---|---|
| 1 | ಬಾಗಲಕೋಟೆ | ಹುನಗುಂದ | 1. ಹಾವರಗಿ<br>2. ಬಿಂಜವಾಡಗಿ |
| 2 | ಬಳ್ಳಾರಿ | ಹಗರಿಬೊಮ್ಮನಹಳ್ಳಿ | 1. ಮುತ್ಕೂರು–ಕಿತ್ನೂರು |
| 3 | ವಿಜಯಪುರ | ಸಿಂಧಗಿ | 1. ಬಂದಾಳ<br>2. ಕನ್ನೊಳ್ಳಿ |

ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಸದರಿ ಗ್ರಾಮ ಪಂಚಾಯಿತಿಗಳನ್ನು ಚುನಾವಣಾ ಪ್ರಕ್ರಿಯೆಯಿಂದ ಕೈಬಿಡುವಂತೆ ಹಾಗೂ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮತದಾರರಿಗೆ ಸೂಕ್ತ ತಿಳುವಳಿಕೆ ನೀಡುವಂತೆ ಆದೇಶಿಸಿದೆ.

**ಆದೇಶಾನುಸಾರ,**

(ಎಂ.ಪಿ. ರಂಜಿತಾ)
**ಅಧೀನ ಕಾರ್ಯದರ್ಶಿ,**
**ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು.

SUNIL GARDE